1	2	3	4
10.	ಮಂಡ್ಯ	27	18
11.	ಕೊಡಗು	10	6
12.	ಹಾಸನ	17	7
13.	ಚಿಕ್ಕಮಗಳೂರು	15	6
14.	ದಕ್ಷಿಣ ಕನ್ನಡ	15	6
15.	ಉಡುಪಿ	9	4
16.	ಬೆಳಗಾವಿ	28	15
17.	ಬಿಜಾಪುರ	9	3
18.	ಬಾಗಲಕೋಟೆ	7	1
19.	ಧಾರವಾಡ	8	2
20.	ಗದಗ	9	3
21.	ಹಾವೇರಿ	10	6
22.	ಉತ್ತರ ಕನ್ನಡ	17	10
23.	ಗುಲ್ಬರ್ಗಾ	18	8
24.	ಬೀದರ್	13	5
25.	ರಾಯಚೂರು	13	7
26.	ಬಳ್ಳಾರಿ	21	9
27.	ಕೊಪ್ಪಳ	13	7
	ಒಟ್ಟು	415	192

577(338) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನಲ್ಲಿರುವ ಗಿರಿವಿನ ಕೊಪ್ಪ–ತಡನಕತ್ರಿ ಪ್ರದೇಶದಲ್ಲಿರುವ ಮಹಿಳಾ ಸಂಘದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೆಣಸಿನಕಾಯಿ ಸಹಕಾರ ಸಂಘದ ವಿವರಗಳೇನು;

ಆ) ಈ ಸಹಕಾರ ಸಂಘಕ್ಕೆ ಸರ್ಕಾರ ನೀಡಿರುವ ಸಹಾಯ ಧನದ ಷೇರು ಮೊಬಲಗು ಎಷ್ಟು (ಈ ಸಂಘದ ಕಾರ್ಯವ್ಯಾಪ್ತಿಯ ವಿವರ ನೀಡುವುದು);

ಇ) ಈ ಸಂಘದ ವರ್ಷದ ಆದಾಯವೆಷ್ಟು (ಕಳೆದ ಮೂರು ವರ್ಷಗಳಲ್ಲಿ ಸಂಘವು ಗಳಿಸಿದ ಲಾಭ–ನಷ್ಟದ ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನ ಗಿರವಿನ ಕೊಪ್ಪದಲ್ಲಿ ಮೆಣಸಿನಕಾಯಿ ಸಹಕಾರ ಸಂಘವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

578(207) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಒಟ್ಟು ಭೂಮಿ ವಿಸ್ತೀರ್ಣ ಎಷ್ಟು;

ಆ) ಇದರಲ್ಲಿ ಕೃಷಿ ಯೋಗ್ಯವಾದ ಭೂಮಿ ಎಷ್ಟು

ಇ) ಪ್ರಸ್ತುತ ಕೃಷಿ ಸಾಗುವಳಿ ಮಾಡುತ್ತಿರುವ ಭೂಮಿ ಎಷ್ಟು;

ಈ) ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿರುವ ಕೃಷಿ ಸಾಗುವಳಿ ಭೂಮಿ ಎಷ್ಟು;

ಉ) ಮಳೆ ಆಧಾರಿತ ಭೂಮಿ ಎಷ್ಟು;

ಊ) ಕೃಷಿ ಜಮೀನನ್ನು ಮುಂದಿನ 3 ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯಡಿ ಅಳವಡಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮವೇನು; ಇದಕ್ಕಾಗಿ ತುಲಬಹುದಾದ ಒಟ್ಟು ವೆಚ್ಚ ಎಷ್ಟು;

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೇಕ್ಟರ್.

ಆ) 2000–01ರ ಕೃಷಿ ಗಣತಿ ಪ್ರಕಾರ ರಾಜ್ಯದಲ್ಲಿ 123.07 ಲಕ್ಷ ಹೇಕ್ಟರ್ ಭೂಮಿ ಕೃಷಿಗೆ ಯೋಗ್ಯವಿದೆ.

ಇ) ಪ್ರತಿ ವರ್ಷದ ಒಟ್ಟು ಸಾಗುವಳಿ ವಿಸ್ತೀರ್ಣ ಮಳೆ, ನೀರಾವರಿ ಸೌಲಭ್ಯ ಮುಂತಾದವುಗಳ ಮೇಲೆ ಅವಲಂಭಿಸಿರುತ್ತದೆ. 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 122,84,116.70 ಹಾಗೂ 115.32 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಈ) ವಿವಿಧ ನೀರಾವರಿ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದು ಕೃಷಿ ಸಾಗುವಳಿ ಭೂಮಿಯ ಒಟ್ಟು ವಿಸ್ತೀರ್ಣ 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 32.71,30.89 ಹಾಗೂ 28.4 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಉ) ಒಟ್ಟು ಸಾಗುವಳಿಯಾದ ವಿಸ್ತೀರ್ಣದಲ್ಲಿ ನೀರಾವರಿ ಪಡೆದಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣ ಮಳೆ ಆಧಾರಿತ ಭೂಮಿಯಾಗಿರುತ್ತದೆ ಇದು 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 90.13, 85.81 ಹಾಗೂ 86.91 ಲಕ್ಷ ಹೆಕ್ಟೇರ್‌ರಷ್ಟು ಇರುತದೆ